
ರಾಯನ್ ಜೊತೆ ಮೇಘನಾ



# ನನ್ನ ಪ್ರೀತಿಯ 'ಬುಚುಕಿ'

**–ಮೇಘನಾ ರಾಜ್, ನಟಿ**

ಅಮ್ಮ–ಮಗುವಿನ ನಡುವಿನ ಬಾಂಧವ್ಯವೇ ಒಂದು ಜಾದೂ. ಅವರಿಬ್ಬರ ನಡುವೆ ನಡೆಯುವ ಪ್ರತಿಯೊಂದು ವಿಷಯವೂ ವಿಶೇಷವೇ. ಅದರಲ್ಲಿ ಮಗು ಮಾತು ಕಲಿಯಲು ಆರಂಭಿಸಿದಾಗ ತೊದಲು ನುಡಿಗಳನ್ನು ಆಡುತ್ತದಲ್ಲ, ಅದಂತೂ ಇನ್ನಿಲ್ಲದ ಖುಷಿ ನೀಡುತ್ತದೆ.

ನನ್ನ ಮಗ ರಾಯನ್ ಮಾತಾಡಲು ಆರಂಭಿಸಿದಾಗ ಕೆಲವು ಪದಗಳನ್ನು ಅವನ ಬಾಯಿಂದ ಕೇಳಿದರೇ ನನಗೆ ಸಂತೋಷವಾಗುತ್ತಿತ್ತು. ಅವನು ಭಾಷೆ ಕಲಿಯುವ ದಿನಗಳು ನನಗೆ ತುಂಬಾ ಸಂತೋಷ ಕೊಟ್ಟಿವೆ. ಅಷ್ಟೇ ಅಲ್ಲ, ಅವನಿಗೆ ಹಾಗೂ ನನಗೆ ಮಾತ್ರ ಅರ್ಥವಾಗುವ ಕೆಲವೊಂದು ಪದಗಳಿದ್ದವು. ಈ ಜಗತ್ತಿನಲ್ಲಿ ನನ್ನ–ಅವನಿಗೆಂದೇ ಇರುವ 'ರಹಸ್ಯ ಭಾಷೆ' ಇದು ಎಂದು ಎಷ್ಟೋ ಸಲ ನನಗೆ ಅನಿಸುತ್ತಿತ್ತು.

ಅದರಲ್ಲಿ ಒಂದು ಪದ 'ಆನಿಟೊ'. ಅವನಿಗೆ ಆರೆಂಜ್ ಅನ್ನೋಕೆ ಬರುತ್ತಿರಲಿಲ್ಲ. ಅದನ್ನು ಆನಿಟೊ ಎನ್ನುತ್ತಿದ್ದ. 'ಆನಿಟೊ ಬೇಕು ಆನಿಟೊ ಬೇಕು' ಅನ್ನುತ್ತಿದ್ದ. ಅದು ನನಗೆ ಮಾತ್ರ ಅರ್ಥವಾಗುತ್ತಿತ್ತು. ಅವನಿಗೆ ಸ್ಕೂಲಿಗೆ ಸೇರಿಸಿದಾಗ ಅಲ್ಲಿ ಅದನ್ನೇ ಕೇಳಿದ್ದಾನೆ. ಅದು ಅಲ್ಲಿ ಯಾರಿಗೂ ಅರ್ಥವಾಗಿರಲಿಲ್ಲ.

ಇಷ್ಟೇ ಅಲ್ಲ, ದೇವರ ಮುಂದೆ ನಿಂತು, 'ಕಾಪಬತ್ತಪ್ಪಾ' ಅನ್ನುತ್ತಾನೆ. ಕಾಪಾಡಪ್ಪ ಅನ್ನೋಕೆ ಈ ರೀತಿ ಹೇಳುವುದು. ಅದು ಮೊದಲು ಯಾರಿಗೂ ಅರ್ಥ ಆಗುತ್ತಿರಲಿಲ್ಲ. ನನಗೆ ಮಾತ್ರ ಗೊತ್ತಾಗಿ ನಗು ಬರುತ್ತಿತ್ತು. ಈ ಥರ ಅವನದೇ ಆದ ಸಾಕಷ್ಟು ಪದಗಳಿವೆ. ಅವನೇನೋ ಕಚಿಪಿಚಿ ಎಂದು ಮಾತಾಡಿದರೂ ನನಗೆ ತಕ್ಷಣ ಅರ್ಥ ಆಗಿರುತ್ತದೆ. ಬೇರೆಯವರೆಲ್ಲಾ ಏನು ಮಾತಾಡಿದ ಎಂದು ಯೋಚಿಸುತ್ತಿರುತ್ತಾರೆ. ನನ್ನ ಕಿವಿಗೆ, ಹೃದಯಕ್ಕೆ ಆ ಮಾತು ಸ್ಪಷ್ಟವಾಗಿ ಕೇಳಿಸಿರುತ್ತದೆ.

ಇದು ಯಾರಿಗೂ ಗೊತ್ತಿಲ್ಲ, ಬರೀ ನಂಗೆ–ಅವನಿಗೆ ಮಾತ್ರ ಗೊತ್ತಿರೋದು ಅನ್ನೋ ಒಂದು ಹೆಮ್ಮೆಯೂ ಯಾವುದೇ ತಾಯಿಗೂ ಇರುತ್ತದೆ. ನನ್ನ ಮಗು ಹೇಳುವುದು ನನಗೆ ಮಾತ್ರ ಗೊತ್ತಾಗುವುದು ಎಂಬ ಸಣ್ಣ ಜಂಬ ಅಮ್ಮನಾದವಳಿಗೆ ತುಂಬಾ ಖುಷಿ ಕೊಡುತ್ತದೆ.

ನಾನು ಕೂಡ ಅವನಿಗೆ ಹೆಸರಿಡದ ದಿನಗಳಲ್ಲಿ ಬಾಯಿಗೆ ಏನು ಬರುತ್ತೋ ಎಲ್ಲವನ್ನೂ ಕರೆಯುತ್ತಿದ್ದೆ. ತುಂಬಾ ಮುದ್ದು ಬಂದಾಗ 'ಬುಚುಕಿ ಬುಚುಕಿ' ಅಂತ ಈಗಲೂ ಕರೆಯುತ್ತೇನೆ. ಅದಕ್ಕೇನೂ ಅರ್ಥ ಇಲ್ಲ. ಅದನ್ನು ಯಾಕೆ ಕರೆದೆ ಎಂದೂ ಗೊತ್ತಿಲ್ಲ. ಆದರೆ ಅವನಿಗೆ ಅದರ ಅರ್ಥ ಗೊತ್ತಿದೆ, ಅದರ ಹಿಂದಿನ ಭಾವನೆ ಗೊತ್ತಿದೆ. 'ಅಮ್ಮ ನಾನು ಬುಚುಕಿ ಬಂದಿದ್ದೀನಿ ನೋಡು' ಎಂದು ಅಷ್ಟೇ ಮುದ್ದಾಗಿ ಹೇಳಿದಾಗ, ಅಮ್ಮನಿಗೆ ಇನ್ನೇನು ಬೇಕು ಅನಿಸುತ್ತದೆ.